**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 293/2022**

| | | |
|---|---|---|
| ಸಾಕ್ಷಿಯ ಹೆಸರುಃ | ಮಂಜುನಾಥ | ಫ್ರಾಸಾಃ 6 |
| ತಂದೆ ಹೆಸರುಃ | ಕುಳ್ಳೇಗೌಡ | ಚಾಸಾಃ 4 |
| ವಯಸ್ಸುಃ | 25 ವರ್ಷ | ಪ್ರಮಾಣೀಕರಿಸಿದ<br>ದಿಃ 25/03/2025 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಅಂಬಲಾರೆ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಚಾಸಾ-1 ಮತ್ತು 2 ರವರು ಗೊತ್ತು. ನನಗೆ ಆರೋಪಿತರು ಗೊತ್ತು.

2. ದಿಃ16/01/2022 ರಂದು ಬೆಳಿಗ್ಗೆ 9.45-10.00 ಗಂಟೆ ಸಮಯದಲ್ಲಿ ಚಾಸಾ-2 ರವರ ಮನೆಯ ಮುಂದೆ ನಾನು ಹೋಗುತ್ತಿದ್ದೆ. ಆಗ ಚಾಸಾ-2 ರವರು ನರಳಾಡಿ ಬಿದ್ದಿದ್ದರು, ಅವರಿಗೆ ಪೆಟ್ಟಾಗಿತ್ತು. ಆಗ ನಾನು ಚಾಸಾ-1 ರವರಿಗೆ ವಿಚಾರಿಸಿದಾಗ ಚಾಸಾ-1 ರವರು ನಾನು ನನ್ನ ಮನೆಯ ಮುಂದೆ ಹೋಗುತ್ತಿದ್ದಾಗ, 1 ಮತ್ತು 2 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದರು, ಆಗ ಚಾಸಾ-2 ರವರು ಅವರನ್ನು ವಿಚಾರಿಸಿದಾಗ, ಆರೋಪಿತರು ಅಲ್ಲೆ ಇದ್ದ ದೊಣ್ಣೆಯನ್ನು ತೆಗೆದುಕೊಂಡು ಚಾಸಾ-2 ರವರ ಬಲಕೈಗೆ ಮತ್ತು ಭುಜಕ್ಕೆ ಹೊಡೆದು ಗಾಯಪಡಿಸಿದರು ಎಂದು ತಿಳಿಸಿದರು. ಚಾಸಾ-2 ರವರ ತಂದೆ ತಾಯಿಯನ್ನು ಹೊಡೆದಿರಲಿಲ್ಲ, ಆದರೆ ಬೈದಿದ್ದರು. 3 ನೇ ಆರೋಪಿತ, 1 ಮತ್ತು 2 ನೇ ಆರೋಪಿತರಿಗೆ ಹೊಡೆಯಲು ಪ್ರಚೋದನೆ ಕೊಡುತ್ತಿದ್ದರು, ಈ ದಿನ ಉಳಿದುಕೊಂಡಿದ್ದೀಯಾ, ಇನ್ನೊಂದು ದಿನ ನಿನ್ನನ್ನು ಮುಗಿಸುತ್ತೇನೆಂದು

ಹೇಳಿದರು ಎಂದು ಚಾಸಾ–1 ರವರು ತಿಳಿಸಿದರು. ನಂತರ ನಾನು ಚಾಸಾ–2 ರವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆ. ನಂತರ ನಾನು ಮತ್ತು ಚಾಸಾ–1 ರವರು ಠಾಣೆಗೆ ಬಂದು ದೂರನ್ನು ಸಲ್ಲಿಸಿದೆವು. ಮಾರನೇ ದಿನ ಚಾಸಾ–2 ರವರು ಪುನಃ ಠಾಣೆಗೆ ಬಂದು ದೂರನ್ನು ಸಲ್ಲಿಸಿದರು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿದ್ದು, ಅದರಿಂದಲೇ 1 ನೇ ಆರೋಪಿತ ಚಾಸಾ–2 ರವರಿಗೆ ಹೊಡೆದು, ಕೈಯಲ್ಲಿಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 3 ನೇ ಆರೋಪಿತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ. 1 ಮತ್ತು 2 ನೇ ಆರೋಪಿತರು ಗೈರು ಹಾಜರಾಗಿದ್ದು, ಅವರ ಗುರುತಿನ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಮಾಡಿರುವುದಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

3. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳನ್ನು ನಾನೇ ಕಣ್ಣಾರೆ ನೋಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

4. ಚಾಸಾ–2 ರವರು ನನಗೆ ಸ್ನೇಹಿತರಾಗಬೇಕು ಎಂದರೆ ಸರಿ. ಆ ದಿನ ಆರೋಪಿತರ ಮತ್ತು ಚಾಸಾ–2 ರವರ ಮಧ್ಯೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರು ನನ್ನ ಸ್ನೇಹಿತನಾದ್ದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ರವನ್ನು ನಾನು ಪಿರಿಯಾಪಟ್ಟಣ

ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಅನಾನೂಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**